ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Thursday, the 5th February 1981/Magha, 16 1902 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI K. H. RANGANATH) in the Chair]

STARRED QUESTIONS
(to which oral answers were given)

Constituting the Minor Irrigation Corparation.

30. SRI RAMESH KUMAR (Srinivasapur)— Will the Minister for Transport and Minor Irrigation be pleased to state :—

(a) whether the Minor Irrigation Corporations constituted for the purpose of drilling Community Wells has come into force? If not, whether Government has dropped the proposal;

(b) the reasons for constituting the Corporation by the previous Government?

SRI M. M. J. SADYOJATHA (Minister for Transport and Minor Irrigation).

(a) Formalities regarding Registration of the Corporations are being attended to.

(b) With a view to extend the benefits of irrigation to the small and marginal farmers under the programme of Community Irrigation Wells.

ಶ್ರೀ ರಮೇಶ್ ಕುಮಾರ್ .— ಸ್ವಾಮಿ, ಸಣ್ಣ ನೀರಾವರಿ ಕಾರ್ಪೊರೇಷನ್ ರಚನೆ ಮಾಡತಕ್ಕ ತೀರ್ಮಾನವನ್ನು ಸರ್ಕಾರ ಯಾವ ತಾರೀಖಿನಲ್ಲಿ ಮಾಡಿತು?

† ಶ್ರೀ ಎಂ. ಎಂ. ಜೆ. ಸದ್ಯೋಜಾತ.— ೧೬ನೇ ಡಿಸೆಂಬರ್ ೧೯೭೯ ರಂದು.

ಶ್ರೀ ರಮೇಶ್ ಕುಮಾರ್ .— ೧೬ನೇ ಡಿಸೆಂಬರ್ ೧೯೭೯ ರಿಂದ ಇದುವರೆಗೂ ಕಾರ್ಪೊರೇಷನ್ ರಿಜಿಸ್ಟರ್ ಮಾಡುವುದಕ್ಕೆ ತೊಂದರೆಯೇನಿತ್ತು? ಇನ್ನು ಎಷ್ಟು ದಿವಸದಲ್ಲಿ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

---

† Indicates that remarks or speeches have not been revised by the member concerned.

ಶ್ರೀ ಎಂ. ಎಂ. ಜೆ. ಸದ್ಯೋಜಾತ .— ಎಲ್ಲಾ ಪೂರ್ತಿಯಾಗಿದೆ. ಇನ್ನು ಒಂದು ತಿಂಗಳೊಳಗಾಗಿ ಕಾರ್ಪೊರೇಷನ್ ರಚನೆಯಾಗಬಹುದು.

ಶ್ರೀ ರಮೇಶ್ ಕುಮಾರ್ .—ನೀವು ಒಂದು ತಿಂಗಳೊಳಗಾಗಿ ಆಗಬಹುದು ಎಂದು ಹೇಳುತ್ತಿದ್ದೀರಿ ಆದರೆ ಆ ಬಗ್ಗೆ ಖಚಿತವಾದ ಉತ್ತರ ಬೇಕು. ಮುಖ್ಯವಾಗಿ ಬರಗಾಲಕ್ಕೆ ತುತ್ತಾಗಿರತಕ್ಕ ಕೋಲಾರ ಜಿಲ್ಲೆಯಲ್ಲಿ ಭೂಗರ್ಭದಲ್ಲಿರುವ ಜಲಸಂಪತ್ತನ್ನು ಬಳಸಿಕೊಂಡು ರೈತರಿಗೆ ಸಹಾಯ ಮಾಡಬೇಕಾದ ಅಗತ್ಯವಿದೆ. ಆದ್ದರಿಂದ ಈಗಿರತಕ್ಕ ಪರಿಸ್ಥಿತಿಯಲ್ಲಿ ಇಷ್ಟು ದಿವಸದಲ್ಲೇ ಪ್ರಾರಂಭ ಮಾಡುತ್ತೇವೆ ಎಂದು ಹೇಳಬೇಕು ಅಥವಾ ನಿಧಾನವಾದರೆ ಆದನ್ನಾದರೂ ಹೇಳಿ.

ಶ್ರೀ ಎಂ. ಎಂ. ಜೆ. ಸದ್ಯೋಜಾತ .— ರಿಜಿಸ್ಟ್ರಾರ್ ಆಫ್ ಕಂಪನೀಸ್ ಅವರಿಗೆ ಕಳುಹಿಸಿದ್ದೇವೆ. ವರಿಂದ ಬಂದನಂತರ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

SRI A. LAKSHMISAGAR .— It pertains to Kolar District. Has the Government made any survey about the availability of underground water?

MR. SPEAKER .— Probably, the other day, the Minister for Mines and Geology has said that about 11 lakhs wells could be dug and the survey has been made.

SRI A. LAKSHMISAGAR .— I want information for Kolar District. My information from the technical authorities is, that the water-table is going down and down. I don't disbelieve the sincerity with which it is being done but ultimately water must be found.

ಶ್ರೀ ಮುನಿಯಪ್ಪ .— ಸ್ವಾಮಿ, ಈಗ ನಾಲ್ಕು ರೆವಿನ್ಯೂ ಡಿವಿಜನ್‌ಗಳೇನಿವೆ ಆದಕ್ಕನುಸಾರವಾಗಿ ಕಾರ್ಪೊರೇಷನ್ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದರು. ಕೊನೆಗೆ ಉತ್ತರ ಮತ್ತು ದಕ್ಷಿಣ ವಲಯದ ಚೀಫ್ ಇಂಜಿನಿಯರ್‌ಗಳನ್ನು ಸೇರಿಸಿ ಎರಡು ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿದ್ದರು, ಈಗ ಯಾವರೀತಿ ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ —ಉತ್ತರ ಮತ್ತು ದಕ್ಷಿಣಕ್ಕೆ ಅಂದರೆ ಎರಡು ಕಾರ್ಪೊರೇಷನ್‌ಗಳನ್ನು ಮಾಡಿದ್ದೇವೆ.

ಶ್ರೀ ಮುನಿಯಪ್ಪ . — ಕಾರ್ಪೊರೇಷನ್ ಇನ್ನೂ ರಿಜಿಸ್ಟರ್ ಆಗಿಲ್ಲ ಎಂದು ಅಪ್ಪಣೆ ಕೊಡಿಸುತ್ತಿದ್ದೀರಿ. ಇದರ ನಿಯಮಗಳು, ನಿಬಂಧನೆಗಳು, ಹಣಕಾಸಿನ ವ್ಯವಸ್ಥೆ ಇದನ್ನೆಲ್ಲಾ ಮಾಡಬೇಕಾದರೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ. ಆದರೆ ಈಗ ಇನ್ನು ಒಂದು ತಿಂಗಳಲ್ಲಿ ರಿಜಿಸ್ಟರ್ ಆಗಿ ಕೆಲಸ ಆಗುತ್ತದೆ ಎಂದು ಹೇಳುತ್ತೀರಿ. ಇದೆಲ್ಲಾ ಆಗಿ ಹೊಲದಲ್ಲಿ ಬೋರ್‌ವೆಲ್ ಹಾಕುವುದಕ್ಕೆ ಎಷ್ಟು ಕಾಲ ಬೇಕು ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ. ಎಂ. ಜೆ. ಸದ್ಯೋಜಾತ .— ನಿಯಮ ನಿಬಂಧನೆಗಳನ್ನು ಮಾಡಿ ರಿಜಿಸ್ಟ್ರೇಷನ್‌ಗೆ ಕಳುಹಿಸಿದ್ದೇವೆ. ಒಂದೊಂದು ವಿಭಾಗಕ್ಕೆ ೫೦ ಲಕ್ಷ ರೂಪಾಯಿಗಳೆಂದು ನಿಗದಿ ಮಾಡಿದ್ದೇವೆ.

SRI A. LAKSHMISAGAR .—That information I want, because this is a vital point. I am questioning with all seriousness. In Bangalore, my persona' experience is that borewells have been dug and in some cases, water is not found even in valleys. This is a very serious matter. If they do not have information let the Minister collect and pass on to the House. There are two zones.. What are the districts which come under these zones?

ಶ್ರೀ ಎಂ. ಎಂ. ಜೆ. ಸದ್ಯೋಜಾತ .— ಹಳೇ ಮೈಸೂರು ಮತ್ತು ಹೊಸ ಮೈಸೂರು ವಿಭಾಗಗಳು ಸೇರುತ್ತವೆ. ಧಾರವಾಡ ಮತ್ತು ಬೆಂಗಳೂರಿನಲ್ಲಿ ಇವುಗಳಿರುತ್ತವೆ.